ಹೊಸ ತಲೆಮಾರಿನ ಪ್ರಮುಖ ವಿಮರ್ಶಕರಲ್ಲಿ ಒಬ್ಬರಾದ ಸುರೇಶ್ ನಾಗಲಮಡಿಕೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವೃತ್ತಿಯಿಂದ ಕನ್ನಡ ಅಧ್ಯಾಪಕರು. 'ಮುತ್ತು ಬಂದಿದೆ ಕೇರಿಗೆ', 'ತಕ್ಕ ಮಣ್ಣಿನ ತೇವಕ್ಕಾಗಿ', 'ಕನಕ ಸಾಹಿತ್ಯ ಮತ್ತು ಲೋಕದೃಷ್ಟಿ', 'ಕಾಣ್ಕೆ ಕಣ್ಕಟ್ಟು', 'ಹಲವು ಬಣ್ಣದ ಹಗ್ಗ' ಅವರ ಪ್ರಮುಖ ಕೃತಿಗಳು.

ರೂಪಿಸುತ್ತವೆ. ಇವುಗಳಿಗೆ ಹೋಲಿಸಿದರೆ 'ಮೊಸರಿನ ಮಂಗಮ್ಮ' ಪೇಲವ ಕಥೆ.

ಮಾಸ್ತಿ ಕಥನದಲ್ಲಿ 'ಹೇಳುವ' ವಿಧಾನಗಳು ದಟ್ಟವಾಗಿವೆ. ಇದು ಹಳೆಯ ತಂತ್ರವೆ. ಆದರೆ, ಮಾಸ್ತಿ ಈ ದಾರಿಯನ್ನು 'ಸರಳ' ಚೌಕಟ್ಟಿಗೆ ಎಳೆದು ತರುತ್ತಾರೆ. ಇದನ್ನು ಕೂಡ ಅವರು ಕೆಲವು ಕಥೆಗಳಲ್ಲಿ ಪ್ರಯೋಗಗಳಿಗೆ ಒಗ್ಗಿಸುತ್ತಾರೆ. ಮಾಸ್ತಿಯವರಿಗೆ ಇದ್ದ ದೊಡ್ಡ ಸವಾಲು, ಭಾರತೀಯ ಕಥಾಪರಂಪರೆಯ ತಂತ್ರ ವಿನ್ಯಾಸಗಳನ್ನು ಮರುರೂಪಿಸುವುದು ಮತ್ತು ಸಾಧ್ಯವಾದಷ್ಟು ಮುರಿದು ಕಟ್ಟುವುದು. 'ಸಣ್ಣಕಥೆ' ಪಾಶ್ಚಾತ್ಯ ಮಾಧ್ಯಮ. ಅದನ್ನು ನೇರವಾಗಿ ತರುವುದು ಮಾಸ್ತಿಯಂತವರಿಗೆ ಕಷ್ಟವಾಗಿದ್ದಿರಬಹುದು. ಈ ಬಗ್ಗೆ ಅನೇಕ ವಿಮರ್ಶಕರು ಚರ್ಚೆಮಾಡಿದ್ದಾರೆ. ಮಾಸ್ತಿಯವರು ಗ್ರಾಮೀಣ ಭಾಗಗಳಲ್ಲಿ ಕೆಲಸ ಮಾಡಿದ್ದರಿಂದ ಅವರ 'ಕೆಲವು' ಅನುಭವಗಳನ್ನು 'ಕಂಡಿದ್ದರು' ಮತ್ತೂ 'ಕೆಲವನ್ನು' 'ಕೇಳಿದ್ದರು'. ಈ 'ಹೇಳುವ' ಮತ್ತು 'ಕೇಳುವ' ವಿಧಾನಗಳು ಜನಪದ ದ್ರವ್ಯಗಳಾದರೂ ಅವುಗಳ 'ಸತ್ವ'ದ ಗ್ರಹಿಕೆಯಿಂದ ಮಾಸ್ತಿ ದೂರ ನಿಲ್ಲುತ್ತಾರೆ. ಈ ಬಗೆಯ ಜೀವಗಳ ಕಥನಗಳು ಮಾಸ್ತಿ ಕೈಯಲ್ಲಿ ತೀರ ಸರಳವಾಗಿಬಿಡುತ್ತವೆ. ಅಂಜಪ್ಪ, ವೆಂಕಟಶಾಮಿ, ವೆಂಕಟಿಗ ಮುಂತಾದ ವ್ಯಕ್ತಿಗಳ ಅಥವ ಜೀವಗಳ ಕಥನಗಳು ಸಹಾನುಭೂತಿಯ ಚೌಕಟ್ಟಿನಲ್ಲಿ ನಿಂತುಬಿಡುತ್ತವೆ. ಮಾಸ್ತಿಯಿಂದ ಈ ಬಗೆಯ ಕಥನಗಳಲ್ಲಿ ಬಯಸಬಹುದಾದ್ದು, ಸಹಾನುಭೂತಿಯನ್ನು ಲೋಕದೃಷ್ಟಿಯ ಭಾಗವಾಗಿ ತರಬೇಕಿತ್ತು ಎನ್ನುವುದು. ಹಾಗಿಲ್ಲದೇ ಹೋದಾಗ ಕೇವಲ ವ್ಯಕ್ತಿಚಿತ್ರಗಳಾಗಿ ಮತ್ತು ಆ ಪಾತ್ರಗಳ ನೆನಪುಗಳಾಗಿ ನಿಂತುಬಿಡುತ್ತವೆ. ಆದರೆ ಮಾಸ್ತಿಯವರು ಕಥಾಜಗತ್ತಿನಲ್ಲಿ ಆರಿಸಿಕೊಂಡ ಭಾಷೆಯ 'ಸರಳ ಚೌಕಟ್ಟು' ಮತ್ತು ಒಂದು ಬಗೆಯ ಶೂದ್ರ ಬದುಕುಗಳಾಚೆ 'ಕಂಡ' ಅನುಭವಗಳಲ್ಲಿ ಗೆಲುವನ್ನು ಸಾಧಿಸುತ್ತಾರೆ. ಪುರಾಣ ವಿನ್ಯಾಸದಲ್ಲಿ ಹುಟ್ಟಿಕೊಂಡ ಕಥೆಗಳಾದ 'ಹೇಮಕೂಟದಿಂದ ಬಂದ ಮೇಲೆ', 'ಗೌತಮಿ ಹೇಳಿದ ಕತೆ', 'ಶ್ರೀಕೃಷ್ಣನ ಅಂತಿಮ ಸಂದರ್ಶನ' ಮುಂತಾದವು ಮತ್ತು ಪಾಶ್ಚಾತ್ಯ ಕವಿಗಳ ಜೀವಿತ ಹಿನ್ನಲೆಯ ಕಥೆಗಳಾದ 'ಕವಿಯ ಬಾಳ ಕೊನೆಯದಿನ', 'ವಿಚಿತ್ರ ಪ್ರೇಮ', 'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ್ವವೃಕ್ಷಗಳು' ಇತ್ಯಾದಿ ಕಥೆಗಳು ಕನ್ನಡ ಕಥನ ಪ್ರಕಾರಕ್ಕೆ ಮಾದರಿಯಾಗಿಯೇ ಇವೆ. ಶೂದ್ರ ಬದುಕಿನ ಜೀವಗಳ ಕಥನಗಳಿಗಿಂತ ಮೇಲಿನ ಕಥೆಗಳಲ್ಲಿ ಸರಳತೆಯನ್ನು ದೊಡ್ಡ ವಿನ್ಯಾಸಕ್ಕೆ ಒಗ್ಗಿಸಿಕೊಳ್ಳಲಾಗಿದೆ. ಭಾಷೆಯನ್ನು ಕಲಾತ್ಮಕಗೊಳಿಸುವಾಗಲೂ ಮಾಸ್ತಿ ಇಲ್ಲಿ ತಮ್ಮದೇ ದಾರಿಯನ್ನು ಹಿಡಿದಿದ್ದಾರೆ. ಇಲ್ಲಿನ ಜೀವಗಳ ಬದುಕಿನ ದೊಡ್ಡ ಮಟ್ಟದ ಸಂಘರ್ಷ, ಮಾನಸಿಕ ತೊಳಲಾಟ, ನೆನಪುಗಳಿಂದ ಹಾದುಬರುವ ಬದುಕಿನ ವೈವಿಧ್ಯ, ಸಾವಿನ ಭಯ ಮತ್ತು ಆಲೋಚನೆಗಳು, ಸಾವು ಮತ್ತು ಪ್ರೇಮಗಳ ಅಂತಿಮ ಸ್ಪರ್ಶ, ಸಿರಿತನ ಮತ್ತು ಅವಧೂತತನಗಳ ಘರ್ಷಣೆ, ಕೆಲವರ ಪಾಲಿಗೆ ಅನೈತಿಕ ಎನ್ನಬಹುದಾದ ಮಿಲನಗಳು ಇಲ್ಲಿ ಭಾವುಕತೆಯ ಮಿಂಚನ್ನು ತಾಕುತ್ತವೆ. (ಅನ್ಯ ದೇಶಗಳ ಕೆಲ ಕಥೆಗಳಿಂದ) ಈ ವಿಚಾರಗಳು ಮೇಲಿನ ಕಥನ ಚೌಕಟ್ಟಿನಲ್ಲಿ ನುಗ್ಗಿ ಮಾಸ್ತಿಯವರನ್ನು ಇಂದಿಗೂ ಮಾದರಿ ಕಥೆಗಾರರನ್ನಾಗಿಯೇ ನಿಲ್ಲಿಸಿವೆ. ಈ ಬಗೆಯ ದಿಕ್ಕುಗಳಲ್ಲಿ ಮಾಸ್ತಿಯವರ ಕಥೆಗಳು ಕನ್ನಡದ ನವೋದಯ, ನವ್ಯ, ಪ್ರಗತಿಶೀಲ ಮುಂತಾದ ಗೆರೆಗಳನ್ನು ಅಳಿಸಲು ಕೊಂಚ ಮಟ್ಟಿಗೆ ಯತ್ನಿಸುತ್ತವೆ. ಇಂಥ ಕಡೆ ಬದುಕಿನ ಕುರಿತು ಆಳವಾಗಿ ಚಿಂತಿಸಬಲ್ಲರು. ವಾಸ್ತವವನ್ನು ಕಲಾತ್ಮಕಗೊಳಿಸುವಲ್ಲಿ ಮತ್ತು ಜೀವನ ಕುರಿತ ನಂಬಿಕೆಯ ದೃಷ್ಟಿಯಿಂದ ಅವರ 'ಕಾಮನಹಬ್ಬದ ಒಂದು ಕತೆ' ಮುಖ್ಯವಾಗುತ್ತದೆ. ವಿಕ್ಷಿಪ್ತತೆ ಮತ್ತು ನಂಬಿಕೆ ಎರಡು ಆಯಾಮಗಳಾಗಿ